**ಓ ಎಸ್ ನಂ 171/2019**

**ಡಿ. ಡಬ್ಲ್ಯೂ ಃ 2**

**ದಿಃ 20.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಃ ವಾದಿ ಪರ ಶ್ರೀ ಬಿ ಜಿ ವಕೀಲರಿಂದ ಃ**

ಪ್ರಮಾಣಪತ್ರವನ್ನು ತಯಾರಿ ಮಾಡಲು ನಮ್ಮ ವಕೀಲರಿಗೆ ರಂಗನಾಥ್ ರವರು ಮಾಹಿತಿಯನ್ನು ನೀಡಿರುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ರಂಗನಾಥ ಎಂದು ತೋರಿಸಲಾಗಿರುವ ರಂಗನಾಥ ನಾನು ಆಗಿರುವುದಿಲ್ಲ. ನನ್ನ ಹೆಸರು ನಾಗರಾಜು ಆಗಿರುತ್ತದೆ. ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿರುತ್ತದೆ. ನಾನು ಮತ್ತು ರಂಗನಾಥ ಒಂದೇ ಊರಿನವರು ಎಂದರೆ ಸರಿ. ವಾದಿಗಳು ನನಗೆ ಪರಿಚಯ ಇರುತ್ತಾರೆ, ಅವರು ನಮ್ಮ ಊರಿನವರೇ ಆಗಿರುತ್ತಾರೆ. ವಾದಿಗಳ ಜೊತೆ ನನ್ನ ಬಾಂಧವ್ಯ ಚೆನ್ನಾಗಿರುತ್ತದೆ.

ನಿಡಿ 6 ನ್ನು ತಯಾರಿ ಮಾಡಲು ನಮ್ಮ ಮನೆಯವರೆಲ್ಲ ಕುಳಿತು ಮಾಹಿತಿ ಪಡೆದು ತಯಾರು ಮಾಡಿರುತ್ತೇವೆ. ನಿಡಿ 6 ನ್ನು ತಯಾರು ಮಾಡುವಾಗ ವಾದಿಗಳು ಮತ್ತು ಅವರ ಮಕ್ಕಳು, ಪ್ರತಿವಾದಿ 2, ರಂಗಸ್ವಾಮಯ್ಯ ಮತ್ತು ಲಕ್ಷ್ಮಮ್ಮ ನವರು ಇದ್ದರು. ನಿಡಿ 6 ನ್ನು ಕುದೂರಿನಲ್ಲಿ ಟೈಪ್ ಮಾಡಲಾಗಿರುತ್ತದೆ. ಸದರಿ ದಾಖಲಾತಿಗೆ ಕುದೂರಿನಲ್ಲಿ ಸಹಿ ಮಾಡಿರುತ್ತೇವೆ. ನಿಡಿ 6 ನ್ನು ತಯಾರು ಮಾಡುವಾಗ ಸ್ಟ್ಯಾಂಪ್ ಪೇಪರ್ ನ್ನು ಪ್ರತಿವಾದಿ 2 ತಂದಿರುತ್ತಾರೆ. ನಿಡಿ 6 ರಲ್ಲಿ ಬರೆದಿರುವ ವಿಚಾರಗಳನ್ನು ನಾನು ತಿಳಿದುಕೊಂಡಿರುತ್ತೇನೆ. ನಿಡಿ 6 ರಲ್ಲಿ ರಂಗಸ್ವಾಮಯ್ಯ ಮತ್ತು ಅವರ ಮಕ್ಕಳು ಸೇರಿ ಮಾಡಿಕೊಂಡಿರುವ ವಿಭಾಗಪತ್ರ ಎಂದು ಇರುವುದಿಲ್ಲ ಎಂದರೆ ಆ ಪತ್ರದಲ್ಲಿ ಹೆಸರು ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ 6 ಸ್ಟ್ಯಾಂಪ್ ಪತ್ರದಲ್ಲಿ ವಾದಿಗಳ ಹೆಸರು ಇರುವುದಿಲ್ಲ ಎಂದರೆ ಸರಿ. ನಿ ಡಿ 6 ಸ್ಟ್ಯಾಂಪ್ ಪತ್ರವನ್ನು ಬಾಂಡ್ ಮಾಡಿಸಿಕೊಳ್ಳಲು ಪಡೆಯಲಾಗಿರುತ್ತದೆ ಎಂದು ಬರೆಯಲಾಗಿರುತ್ತದೆ ಎಂದರೆ ಸರಿ.

ರಂಗಸ್ವಾಮಯ್ಯ ನವರಿಗೆ ಎಷ್ಟು ಆಸ್ತಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ನಾಲ್ಕು ಕಡೆ ಇರುತ್ತದೆ ಎಂದು ನನಗೆ ಹೇಳಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಸ.ನಂ.49/9 ರಲ್ಲಿ 22 ಗುಂಟೆ , ಸ.ನಂ. 87/1 ರಲ್ಲಿ 17 ವರೆ ಗುಂಟೆ ತೋರಿಸಿರುವ ಆಸ್ತಿ ರಂಗಸ್ವಾಮಯ್ಯ ನವರ ಕುಟುಂಬಕ್ಕೆ ಸೇರಿದ ಆಸ್ತಿಯಾಗಿರುವುದಿಲ್ಲ ಎಂದರೆ ಸಾಕ್ಷಿ ಅವರ ಹೆಸರಿನಲ್ಲಿ ಯಾವ ಆಸ್ತಿಗಳು ಇರುತ್ತದೆ ಎಂದು ನನಗೆ

ಗೊತ್ತಿಲ್ಲ, ನನಗೆ ರಂಗಸ್ವಾಮಯ್ಯ ನವರ ಆಸ್ತಿಗಳ ಸ,ನಂ. ಮತ್ತು ವಿಸ್ತೀರ್ಣ ಗೊತ್ತಿರುವುದಿಲ್ಲ. ಸ.ನಂ. 42/9 ರಲ್ಲಿ 22 ಗುಂಟೆ, ಸ.ನಂ. 79/1 ನ್ನು ದಾವಾ ಸ್ವತ್ತುಗಳಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಸದರಿ ಆಸ್ತಿಗಳು ರಂಗನಾಥ ರವರ ಹೆಸರಿನಲ್ಲಿರುತ್ತದೆ ಎಂದರೆ ಸರಿ. ನಿಡಿ 6 ರ ಪ್ರಕಾರ ರಂಗನಾಥ ರವರ ಹೆಸರಿಗೆ ಯಾವುದೇ ಖಾತೆ ಬದಲಾವಣೆಯಾಗಿರುವುದಿಲ್ಲ ಎಂದರೆ ಗೊತ್ತಿಲ್ಲ. ಯಾವುದೋ ವ್ಯವಹಾರಕ್ಕೆ ಸ್ಟ್ಯಾಂಪ್ ಪೇಪರ್ ನ್ನು ಖರೀದಿ ಮಾಡಿ ನಿಡಿ 6 ನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಇದೇ ವ್ಯವಹಾರಕ್ಕೆ ಸದರಿ ಸ್ಟ್ಯಾಂಪ್ ಪೇಪರ್ ನ್ನು ತಂದಿದ್ದರು ಎಂದು ನುಡಿಯುತ್ತಾರೆ. ರಂಗನಾಥರವರು ನಿಡಿ 6 ರಲ್ಲಿ ಇರುವ ಸಹಿಗಳನ್ನು ಸೃಷ್ಟಿ ಮಾಡಿರುತ್ತಾರೆ ಮತ್ತು ನಿಡಿ 6 ರಂತೆ ಯಾವುದೇ ವ್ಯವಹಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗಳು ರಂಗನಾಥ ರವರ ಮನೆಗೆ ಈಗ ಬರುತ್ತಿಲ್ಲ, ಆದರೆ ಮುಂಚೆ ಬಂದು ಹೋಗಿ ಮಾಡುತ್ತಿದ್ದರು. ವಾದಿಗಳು ಮದುವೆಯಾದ ಸಮಯದಿಂದ ಮನೆಗೆ ಬರುತ್ತಿಲ್ಲ, ಅವರು ನಿಡಿ 6 ನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಡಿ 6 ನ್ನು ಸೃಷ್ಟಿ ಮಾಡಿಕೊಂಡು ಅವರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ರಂಗನಾಥ ರವರಿಗೆ ಅನುಕೂಲವಾಗಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**